**ಓ ಎಸ್ ನಂಃ 137/2022 10 ಪಿ ಡಬ್ಲೂಃ1 ಶ್ರೀ ಪರಶುರಾಮ**

ದಿನಾಂಕಃ 12-06-2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ 9 ರಿಂದ 17 ನೇ ಪ್ರತಿವಾದಿಗಳ ಪರ ಶ್ರೀ ಆರ್ ಬಿ ಯು ವಕೀಲರಿಂದಃ**

4. ದಾವಾ ಹಾಕಲು ವಕೀಲರಿಗೆ ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ದಾವಾ ಪೂರ್ವದಲ್ಲಿ ಹಿಸ್ಸಾ ಮಾಡಿ ಕೊಡುವಂತೆ 1 ರಿಂದ 17 ನೇ ಪ್ರತಿವಾದಿಗಳನ್ನು ಕೇಳಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸರ್ವೇ ನಂಬರ 21/2 ಬಿ, ಕ್ಷೇತ್ರ 6 ಎಕರೆ 21 ಗುಂಟೆ 21/3 ಕ್ಷೇತ್ರ 4 ಎಕರೆ 37 ಗುಂಟೆ 14 ಆಣೆ, 21/4 ಕ್ಷೇತ್ರ 1 ಎಕರೆ 10 ಗುಂಟೆ, ಮತ್ತು 21/5 ಕ್ಷೇತ್ರ 00 ಎಕರೆ 30 ಗುಂಟೆ, 44/2 ಬಿ ಕ್ಷೇತ್ರ 3 ಎಕರೆ 7 ಗುಂಟೆ, ಮನೆ ಮತ್ತು ಖುಲ್ಲಾ ಜಾಗದ ಆಸ್ತಿ ನಂಬರ 231, 231 ಎ, 240 ಮತ್ತು 241. ಸದರಿ ಆಸ್ತಿಗಳಿಗೆ ಮೂಲ ಮಾಲೀಕರು ತಾಯವ್ವ ಮತ್ತು ನಿಂಗಪ್ಪ. ಸದರಿಯವರಲ್ಲಿ ತಾಯವ್ವ 1969 ರಲ್ಲಿ ತೀರಿಕೊಂಡಿರುತ್ತಾರೆ. ಸದರಿಯವರಿಗೆ ಒಟ್ಟು ಮೂವರು ಜನ ಮಕ್ಕಳು. ಅವರಲ್ಲಿ ಒಂದು ಗಂಡು ಮತ್ತು ಇಬ್ಬರು ಹೆಣ್ಣು ಮಕ್ಕಳು. ಅವರೆಂದರೆ, ನಾಗಪ್ಪ, ಮಲ್ಲವ್ವ ಮತ್ತು ಗಂಗವ್ವ. ದಾವಾ ಆಸ್ತಿಗಳು ತಾಯವ್ವಳ ಪಿತ್ರಾರ್ಜಿತ ಆಸ್ತಿಗಳು. ದಾವಾ ಆಸ್ತಿಗಳ ಪೈಕಿ ಸರ್ವೇ ನಂಬರ 21/2 ನಾಗಪ್ಪ ಖರೀದಿಸಿದ ಆಸ್ತಿ ಎಂದರೆ ಸರಿಯಲ್ಲ. ನಾಗಪ್ಪನಿಗೆ ಇಬ್ಬರು ಪತ್ನಿಯರಿಲ್ಲ, ಒಬ್ಬರೇ ಪತ್ನಿ ಎಂದರೆ ಸರಿಯಲ್ಲ. ಒಬ್ಬಾಕೆ ತೀರಿಕೊಂಡ ನಂತರ 2 ನೇ ಯವರನ್ನು ಮದುವೆ ಆಗಿದ್ದಾರೆ ಎಂದರೆ ಸರಿಯಲ್ಲ. 1 ನೇ ಹೆಂಡತಿ ಸಾವಕ್ಕನ ಮಗ ರಾಮಪ್ಪ, 2 ನೇ ಹೆಂಡತಿ ನೀಲವ್ವನ ಮಕ್ಕಳು ಚನ್ನಪ್ಪ, ನಿಂಗವ್ವ ಮತ್ತು ತಾಯವ್ವ.

5. ತಾಯವ್ವ ತೀರಿಕೊಂಡ ನಂತರ ವಾರಸಾ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದೀರಾ ಎಂದರೆ ಹಾಜರು ಪಡಿಸಿದ್ದೇನೆ. ಗಂಗವ್ವಳ ವಾರಸಾ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದೀರಾ ಎಂದರೆ ಹಾಜರು ಪಡಿಸಿದ್ದೇನೆ. 9 ಮತ್ತು 14 ರಿಂದ 17 ನೇ ಪ್ರತಿವಾದಿಗಳ ತಾಯಿಯ ಹೆಸರು ಸಾಮೂಹಿಕವಾಗಿ ಸರ್ವೇ ನಂಬರ 44/2 ಬಿ ದಾಖಲಾಗಿರುತ್ತವೆ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲು ಃ ಸಮಯ ಕೋರಿದ್ದು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

Sd/-

ಹಿರಿಯ ದಿವಾಣಿ ನ್ಯಾಯಾಧೀಶರು,

ಕುಂದಗೋಳ.